**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ. 3/2020**

**ಪಿರ್ಯಾದಿದಾರರು** – ರಾಜ್ಯದ ಪರವಾಗಿ
ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರು,
ಹಾವೇರಿ.

**– ವಿರುದ್ಧ –**

**ಆರೋಪಿ** – ಖಾಜಾಮೈನುದ್ದೀನ ಅಬ್ದುಲರಹೀಮ ಕಿಲ್ಲೇದಾರ

**:: ದೋಷಾರೋಪಣೆ ::**

ಹಾವೇರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರಾದ ಶ್ರೀ ಕೆ.ಸಿ.ಸದಾನಂದಸ್ವಾಮಿ ; ನಾನು ಈ ಕೆಳಕಂಡ ಆರೋಪಿಯಾದ -

ಖಾಜಾಮೈನುದ್ದೀನ ಅಬ್ದುಲರಹೀಮ ಕಿಲ್ಲೇದಾರ,
ವಯಾಃ 35 ವರ್ಷ, ಉಃ ಗ್ರಾಮ ಲೆಕ್ಕಾಧಿಕಾರಿ,
ಹುಲಸೋಗಿ ಸಾಜಾ, ಶಿಗ್ಗಾಂವ
ವಾಸ ಸ್ಥಳಃ ಶಿಗ್ಗಾಂವ, ಶಿಗ್ಗಾಂವ ತಾ, ಹಾವೇರಿ ಜಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಆರೋಪಿಯು ಗ್ರಾಮಲೆಕ್ಕಾಧಿಕಾರಿಯಾಗಿದ್ದು, ಹಿರೇಮಣಕಟ್ಟಿ ಗ್ರಾಮದ ವಾಸಿಯಾದ ಚಾಸಾ-1 ಇವರ ತಂದೆ ಮರಣ ಹೊಂದಿದ್ದರಿಂದ, ಅವರ ಹೆಸರಿನಲ್ಲಿರುವ ಹಿರೇಮಣಕಟ್ಟಿ ಗ್ರಾಮದ ಸರ್ವೆ ನಂ-12/2 ಅ ಹಾಗೂ ಹುಲಸೋಗಿ ಗ್ರಾಮದ ಸರ್ವೆ ನಂ-73/2 ರ ಜಮೀನಿನ ಉತಾರದಲ್ಲಿ ಚಾಸಾ-1 ರವರ ತಂದೆಯ ಹೆಸರನ್ನು ಕಡಿಮೆ ಮಾಡಿ ವಾರಸುದಾರರಾದ ಚಾಸಾ-1 ರವರ ಹೆಸರಿಗೆ ಉತಾರ ಮಾಡಿ ಕೊಟ್ಟಿದ್ದು, ಸದರಿ ಕೆಲಸ ಮಾಡಿಕೊಡಲು ಆರೋಪಿಯು ರೂ.6,000/- ಲಂಚದ ಹಣವನ್ನು

ಕೊಡುವಂತೆ ಬೇಡಿಕೆ ಇಟ್ಟಿದ್ದು, ದಿನಾಂಕ:2/3/2019 ರಂದು PMJY ಗೆ ಅರ್ಜಿ ಹಾಕಲು 'ಅ' ಖಾತೆ ಅವಶ್ಯವಿದ್ದು, ಆರೋಪಿಗೆ 'ಅ' ಖಾತೆ ಉತಾರ ಕೊಡುವಂತೆ ಕೇಳಿದ್ದಕ್ಕೆ, ಹಳೆಯದನ್ನು ಸರಿ ಮಾಡಿಕೊಡು ನಂತರ 'ಅ' ಖಾತೆ ಕೊಡುತ್ತೇನೆ ಅಂತಾ ಹೇಳಿ ಲಂಚದ ಹಣದ ಬೇಡಿಕೆ ಇಟ್ಟಿದ್ದು, ದಿನಾಂಕ:5/3/2019 ರಂದು ಚಾಸಾ-1 ರವರು ಆರೋಪಿಯನ್ನು ಕಛೇರಿಗೆ ಹೋಗಿ ಭೇಟಿಯಾಗಿ 'ಅ' ಖಾತೆ ಉತಾರ ನೀಡುವಂತೆ ಕೇಳಿದಾಗ, ಆರೋಪಿಯು ರೂ.6,000/- ಗಳ ಲಂಚದ ಹಣ ಕೇಳಿ ರೂ.4,000/- ಲಂಚದ ಹಣವನ್ನು ಚಾಸಾ-1 ರವರಿಂದ ಸ್ವೀಕರಿಸಿ ಪೊಲೀಸರ ಬಲೆಗೆ ಸಿಕ್ಕಿ ಬಿದ್ದು, ಆರೋಪಿಯು ಸರ್ಕಾರಿ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿದ್ದು, ಆ ಮೂಲಕ ಆರೋಪಿಯು ಪಿಸಿ ಕಾಯ್ದೆ-1988 ರ ಕಲಂ.7(ಎ) (ತಿದ್ದುಪಡಿ ಕಾಯ್ದೆ-2018) ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಎಸಗಿರುತ್ತಾರೆ ಮತ್ತು ಅವು ಈ ನ್ಯಾಯಾಲಯದ ಸಂಜ್ಞೆಯಲ್ಲಿವೆ.

ಈ ಮೇಲೆ ಹೇಳಿದ ದೋಷಾರೋಪಣೆಗಳಿಗಾಗಿ ಈ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಯಲಿದೆ.

**ಹಾವೇರಿ** **(ಕೆ.ಸಿ. ಸದಾನಂದಸ್ವಾಮಿ)**

**ದಿನಾಂಕ: 30/07/2024** **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ. 3/2020**

ಫಿರ್ಯಾದಿ - ಸರಕಾರ – ಪ್ರತಿನಿಧಿಸುವವರು
ಸರಕಾರಿ ಅಭಿಯೋಜಕರು, ಹಾವೇರಿ.

**– ವಿರುದ್ಧ –**

ಆರೋಪಿ - ಖಾಜಾಮೈನುದ್ದೀನ ಅಬ್ದುಲರಹೀಮ ಕಿಲ್ಲೇದಾರ,

**ಆರೋಪಿಯ ಹೇಳಿಕೆ**

ಪ್ರಶ್ನೆ-1 - ನಿಮ್ಮ ಮೇಲೆ ಓದಿ ಹೇಳಲಾದ ದೋಷಾರೋಪಣೆಯನ್ನು ತಿಳಿದುಕೊಂಡಿರುವಿರಾ?

ಉತ್ತರ - ತಿಳಿದಿದೆ.

ಪ್ರಶ್ನೆ-2 - ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಅಧಿವಿಚಾರಣೆ ಬಯಸುತ್ತೀರೋ?

ಉತ್ತರ - ದೋಷಾರೋಪಣೆ ಒಪ್ಪಿಕೊಳ್ಳುವುದಿಲ್ಲ. ವಿಚಾರಣೆಯಾಗಬೇಕು.

ಆರೋಪಿ ಸಹಿ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅವರು ಕೊಟ್ಟ ಹೇಳಿಕೆಯನ್ನು, ನಾನೇ ಖುದ್ದು ದಾಖಲಿಸಿಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

**ಸ್ಥಳಃ ಹಾವೇರಿ**

**ದಿನಾಂಕಃ 30/07/2024**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.**